**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ 35/2022**

ಪಿ.ಡಬ್ಲುಃ **14** ಸಿಡಬ್ಲುಃ-**20**

| | | |
|---|---|---|
| ಸಾಕ್ಷಿಯ ಹೆಸರು | : | ಪಿ. ಶ್ರೀನಿವಾಸ |
| ತಂದೆಯ ಹೆಸರು | : | ಪಿ ಸುಬ್ಬಣಾಚಾರ |
| ವಯಸ್ಸು | : | **62** ವರ್ಷ |
| ವೃತ್ತಿ | : | ನಿವೃತ್ತ ಲೋಕೋಪಯೋಗಿ ಇಲಾಖೆ ಸಹಾಯ ಇಂಜಿನಿಯರ್ |
| ವಾಸಸ್ಥಳ | : | ಬೆಂಗಳೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 18.10.2025.**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-**

(ಚಾಸಾ-20 ಇವರು ವಿ.ಸಿ ಮೂಲಕ ಹಾಜರಾಗಿದ್ದು ರಿಮೋಟ್ ಎಂಡಿನಲ್ಲಿ ಸಾಗರ ಇವರು ಸಯೋಜಕರಾಗಿರುತ್ತಾರೆ. ಕೋರ್ಟ ಎಂಡಿನಲ್ಲಿ ಶ್ರೀಮತಿ ಆರ್. ಜಿ ನಾಗಶ್ರೀ ಸಿಸ್ಟಂ ಸಹಾಯಕ ಸಂಯೋಜಕರಾಗಿರುತ್ತಾರೆ. )

1) ನಾನು 2008 ರಿಂದ ಫೆಬ್ರುವರಿ 2023 ರವರಗೆ ಬಳ್ಳಾರಿಯಲ್ಲಿ ಸಹಾಯಕ ಇಂಜಿನಿಯರ್ ಎಂದು ಲೊಕೋಪಯೋಗಿ ಇಲಾಖೆಯಲ್ಲಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 05.12.2021 ರಂದು ನಮ್ಮ ಕಛೇರಿಗೆ ಆರಕ್ಷರು ಉಪಾಧೀಕ್ಷರು, ಬಳ್ಳಾರಿ ನಗರ ಉಪ ವಿಭಾಗ, ಬಳ್ಳಾರಿ ಇವರಿಂದ ಬಳ್ಳಾರಿ ನಗರದ ರೂಪನಗುಡಿ ರಸ್ತೆಯ ಹರಿಶ್ಚಂದ್ರ ಘಾಟ್ ಕ್ರಾಸ್, ವಾರ್ಡ ನಂಬರ 9 ರಲ್ಲಿ ಅನಿಲಕುಮಾರ ಇವರಿಗೆ ಸೇರಿದ ಮನೆಯಲ್ಲಿ ಕೃತ್ಯ ನಡೆದಿದ್ದು ಅದರ ನಕ್ಷೆಯನ್ನು ತಯಾರಿಸಿ ಕೊಡಲು ಕೋರಿದ ಪ್ರಯುಕ್ತ ನಾನು ಮತ್ತು ಶ್ರೀ ಹರಿಮೂರ್ತಿ ಪಿಸಿಎಚ್ ಕೌಲ ಬಜಾರ ಪೊಲೀಸ ಠಾಣೆ ಬಳ್ಳಾರಿ ಇವರ ಜೊತೆಯಲ್ಲಿ

ದಿನಾಂಕ **19.01.2022** ರಂದು ಕೃತ್ಯ ಸ್ಥಳವನ್ನು ಪರಿಶೀಲಿಸಿ ನಕ್ಷೆಯನ್ನು ತಾಯಾರಿಸಿ ದಿನಾಂಕ **25.01.2022** ರಂದು ನಮ್ಮ ಕಛೇರಿಯಿಂದ ಸಲ್ಲಿಸಲಾಯಿತು.

**2)** ತನಿಖಾಧಿಕಾರಿಗಳು ತಯಾರು ಮಾಡಿದ ಮನವಿಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಪಿ-**26** ಎಂದು ಗುರುತಿಸಲಾಯಿತು. ನಾನು ತಯಾರಿಸಿದ ನಕ್ಷೆಯನ್ನು ನಿಪಿ-**27** ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು. ನಮ್ಮ ಕಛೇ ರಿಯ ಪತ್ರ ವನ್ನು ನಿಪಿ28 ಎಂದು ಗುರುತಿಸಲಾಯಿತು.

<u>ಪಾಟೀಸವಾಲು ಆರೋಪಿತರ ಪರ ಶ್ರೀ ಎಮ್ . ಎ.ಬಿ. ವಕೀಲರಿಂದಃ</u>

**3)** ನಾನು ಪೊಲೀಸರು ನೀಡಿದ ಮಾಹಿತಿ ಆಧಾರದ ಮೇಲಿಂದ ನಿಪಿ-**27** ನಕ್ಷೆಯನ್ನು ತಾಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-**27** ರಲ್ಲಿ ಗುರುತಿಸಿದ ಸಥಳವನ್ನು ಪೊಲೀಸ್ ಪೇದೆ ತೋರಿಸಿದ್ದಾರೆ ಎಂದರೆ ಸರಿ. ನಾನು ಕೃತ್ಯ ಸ್ದಳವನ್ನು ಪ್ರತ್ಯಕ್ಷವಾಗಿ ಅವಲೋಕಿಸಿಲ್ಲ ಮತ್ತು ಪೊಲೀಸ್ ಪೇದೆಯ ಮಾಹಿತಿ ಆಧಾರ ಮೇಲಿಂದ ನಕ್ಷೆಯನ್ನು ತಾಯಾರಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ನಿಪಿ-**27** ನಕ್ಷೆಯಲ್ಲಿ ಅನಿಲಕುಮಾರ ಮತ್ತು ತಾರಕೇಶ ಇವರ ಮನೆಯ ಮಧ್ಯದಲ್ಲಿರುವ **3** ನೇ ಆರೋಪಿ ಲಕ್ಷ್ಮಿ ಇವಳ ಮನೆಯನ್ನು ತೋರಿಸಿಲ್ಲ ಎಂದರೆ ಸರಿ.

**4)** ಅನಿಲಕುಮಾರನ ಮನೆಯಲ್ಲಿ ಕಿಚನ್ ಯಾವ ದಿಕ್ಕಿಗೆ ಇದೆ, ಬಾಥರೂಮ್ ಯಾವ ದಿಕ್ಕಿಗೆ ಇದೆ ಮತ್ತು ಬೆಡ್ ರೂಮ್ ಯಾವ ದಿಕ್ಕಿಗೆ ಎಂದು ತೋರಿಸಿಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಕೃತ್ಯ ನಡೆದಿದ್ದು ಹಾಲ್‌ನಲ್ಲಿ ಆದ್ದರಿಂದ ಹಾಲ್ ಅನ್ನು ಮಾತ್ರ ತೋರಿಸಲಾಗಿದೆ. ನಿಪಿ-**27** ನಕ್ಷೆಯಲ್ಲಿ ಅನಿಲ್ ಕುಮಾರ ಇವರ ಮನೆಯಲ್ಲಿ ಹಾಲ್ ಎಂದು ಬರೆದಿಲ್ಲ ಎಂದರೆ ಸರಿ. ನಿಪಿ-**27** ನಕ್ಷೆಯಲ್ಲಿ ಅನಿಲ್ ಕುಮಾರು ಇವರ ಮನೆಯ ಬಾಗಿಲು ಹಾಗು ಕಿಡಕಿಗಳನ್ನು ತೋರಿಸಿಲ್ಲ. ನಿಪಿ-**27** ನಕ್ಷೆಗಳಲ್ಲಿ ಹಾಲ್‌ನ ಚೆಕ್ಕುಬಂದಿಗಳನ್ನು ತೋರಿಸಿಲ್ಲ

ಎಂದರೆ ಸರಿ. ನಿಪಿ-27 ನಕ್ಷೆಯನ್ನು ಸ್ಥಳದಲ್ಲಿ ಕಚ್ಛಾ ನಕ್ಷೆಯನ್ನು ತಯಾರಿಸಿ ಕಛೇರಿಯ ಗಣಕಯಂತ್ರದಲ್ಲಿ ಅದನ್ನು ತಯಾರಿಸಿರುತ್ತೇನೆ ಮೂಲ ಕಚ್ಚಾ ನಕ್ಷೆಯನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ. ನಾನು ಪೋರೆನ್ಸಿಕ್ ವಿಶೇಷ ತರಬೇತಿ ಹೊಂದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ವಿಶೇಷ ತರಬೇತಿ ಹೊಂದಿರದೇ ಇದ್ದರೂ ಕೂಡ ಹೊಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**5)** ತನಿಖಾಧಿಕಾರಿಗೆ ಸಹಾಯ ಮಾಡಲು ಅವರು ಹೇಳಿದಂತೆ ಕಛೇರಿಯಲ್ಲೆ ಕುಳಿತು ನಿಪಿ-27 ನಕ್ಷೆಯನ್ನು ತಾಯಾರಿಸಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ಯಾವ ಸಂಗತಿಗಳನ್ನು ಬಿಡು ಎಂದು ಹೆಳಿದ್ದಾರೆ ಅವುಗಳನ್ನು ನನ್ನ ನಕ್ಷೆಯಲ್ಲಿ ಬಿಟ್ಟಿದ್ದೇನೆ ಮತ್ತು ಯಾವ ಸಂಗತಿಗಳನ್ನು ಸೇರಿಸು ಎಂದು ಹೇಳಿದ್ದಾರೆ ಅವುಗಳನ್ನು ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.

ಸಾಕ್ಷಿಯ ಸಹಿ | ಸಂಯೋಜಕರ ಸಹಿ